## ಮೂವಿ ಮೊಮೆಂಟ್ಸ್

ವಿಂಡೋಸ್ ಸ್ಮಾರ್ಟ್ ಫೋನ್‌ನಲ್ಲಿ ಮಿನಿ ಸಿನಿಮಾಗಳನ್ನು ತಯಾರಿಸಲು ಈ ಉಚಿತ ಆ್ಯಪ್ ನೆರವು ನೀಡುತ್ತದೆ. ನಿಮ್ಮ ಬಳಿ ಇರುವ ವಿಡಿಯೋ ಕ್ಲಿಪ್‌ಗಳನ್ನು ಎಡಿಟ್ ಮಾಡಿ ಒಂದು ಸಿನಿಮಾ ಸಿದ್ಧಪಡಿಸಬಹುದು. ವಿಂಡೋಸ್ ಫೋನ್‌ನಲ್ಲಿ 41 ಮೆಗಾ ಪಿಕ್ಸೆಲ್‌ನಷ್ಟು ಶಕ್ತಿಯುತ ವಿಡಿಯೋ ಕ್ಯಾಮೆರಾ ಇದೆ. ನೀವು ಶೂಟ್ ಮಾಡಿದ ನಂತರ ವೈನ್ ಆ್ಯಪ್ ಮೂಲಕ ಅದನ್ನು 60 ಸೆಕೆಂಡುಗಳಿಗೆ ಇಳಿಸಬಹುದು. ನಂತಹ ಮೂವಿ ಮೊಮೆಂಟ್ಸ್‌ನಲ್ಲಿ ಎಡಿಟ್ ಮಾಡಿ ಶೀರ್ಷಿಕೆಗಳನ್ನು ಕೊಡಬಹುದು. ಹಾಗೇ ಹಿನ್ನೆಲೆ ಸಂಗೀತ ಕೂಡಾ ಲಭ್ಯ. ಅದನ್ನೂ ಅಳವಡಿಸಬಹುದು. ಇದೆಲ್ಲಾ ಮುಗಿದ ನಂತರ ನಿಮಗೆ ಅಂತಿಮ ಚಿತ್ರ ದೊರಕುತ್ತದೆ. ಅದನ್ನು ಫಿಕ್ಚರ್ ಫೋಲ್ಡರ್‌ನಲ್ಲಿ ಕಾಪಿಟ್ಟ ನಂತರ ಶೇರ್ ಬಟನ್ ಒತ್ತಿದರೆ ಫೇಸ್‌ಬುಕ್, ಬ್ಲೂಟೂಥ್, ಇ-ಮೇಲ್ ಖಾತೆ, ಒನ್‌ನೋಟ್ ಎಲ್ಲಾ ಕಡೆ ಶೇರ್ ಮಾಡಿಕೊಳ್ಳಬಹುದು.






## ಫ್ರೂಡು ಕಿಚನ್

ಇನ್ನೂ ಶಾಲೆಗೆ ತೆರಳದ ಚಿಕ್ಕ ಮಕ್ಕಳ ಐಪ್ಯಾಡ್ ಗೇಮಿದು. ದೈತ್ಯ ಜೀವಿಗಳಿಗೆ ಅಡುಗೆ ಸಿದ್ಧಪಡಿಸುವ ಈ ಆಟ ಮಕ್ಕಳಿಗೆ ಅದ್ಭುತ ಮನರಂಜನೆ ನೀಡುತ್ತದೆ. ಆಕರ್ಷಕ ಗ್ರಾಫಿಕ್ಸ್ ಕೂಡಾ ಇದೆ. ಸಮಸ್ಯೆಗಳನ್ನು ಬಿಡಿಸುವುದು ಬಹಳ ಸುಲಭ. ಸೂಚನೆಗಳನ್ನು ಮಕ್ಕಳು ಗ್ರಹಿಸಬಹುದು. ಕಾರ್ಟೂನ್ ಚಿತ್ರಗಳು ಮಕ್ಕಳ ಮನಸೆಳೆಯುವಂತಿವೆ. ದೈತ್ಯರು ಬೇಕರಿಗೆ ಬಂದು ಬೇಡಿಕೆ ಸಲ್ಲಿಸುವ ಡೋನಟ್, ಕಪ್‌ಕೇಕ್ ಮೊದಲಾದ ತಿಂಡಿಗಳನ್ನು ಫೋನ್ ಮೇಲೆ ತೀಡುವುದರ ಮೂಲಕ ತಯಾರಿಸುವ ಆಟ ಮಕ್ಕಳಿಗೆ ಖುಷಿ ನೀಡುವಂಥದ್ದು. ಪರಿಕರಗಳನ್ನು ಮಿಶ್ರ ಮಾಡಿ, ಬೇಕ್ ಮಾಡಿ ನಂತರ ತಿಂಡಿಯನ್ನು ಅಲಂಕರಿಸುವ ಮೂರು ಹಂತಗಳಿವೆ. ದೈತ್ಯನಿಗೆ ಇಷ್ಟವಾದರೆ ಒಂದು ನಾಣ್ಯ ಕೊಡುತ್ತದೆ, ಇಲ್ಲವಾದರೆ ತಿಂಡಿಯನ್ನು ಎಸೆದು ಬಿಡುತ್ತದೆ.

## ಪೋಲಾರಿಸ್ ಆಫೀಸ್ 5

ಐಪ್ಯಾಡ್‌ನ ಈ ಆ್ಯಪ್ 3 ಇನ್ 1 ಆ್ಯಪ್. ನಿಮ್ಮ ಐಪ್ಯಾಡ್‌ನಲ್ಲಿ ಹೆಚ್ಚಿನ ಜಾಗವನ್ನು ತಿನ್ನದೇ ಸುಲಭವಾಗಿ ಕೆಲಸ ನಿರ್ವಹಣೆಗೆ ನೆರವಾಗುತ್ತದೆ. ಸಂಕೀರ್ಣ ಕೆಲಸವನ್ನೂ ಕೂಡಾ ಸುಲಭವಾಗಿ ಮಾಡಬಹುದು. ನಿಮ್ಮ ಡ್ರಾಪ್‌ಬಾಕ್ಸ್, ಗೂಗ್ಲ್ ಡ್ರೈವ್‌ನಂತಹ ಸ್ಟೋರೇಜ್‌ಗೆ ತಲುಪಲು, ಹೊಸ ಡಾಕ್ಯುಮೆಂಟ್ ಸೃಷ್ಟಿಸಲು ಹಾಗೂ ಇದ್ದ ಫೈಲ್‌ಗಳನ್ನು ಎಡಿಟ್ ಮಾಡಲು ಇದೊಂದೇ ಆ್ಯಪ್ ಸಹಾಯ ಮಾಡುತ್ತದೆ. ಜೊತೆಗೆ ಫೈಲ್‌ಗಳನ್ನು ಲೋಕಲ್‌ನಲ್ಲೂ ಕಾಪಿಡಬಹುದು.







## ಅಡೋಬ್ ವೈಸ್

ಐಪ್ಯಾಡ್‌ನಲ್ಲಿ ದೃಶ್ಯಾವಳಿಗಳ ವಿವರಣೆಗೆ ಇದೊಂದು ಉತ್ತಮ ಆ್ಯಪ್. ಪವರ್ ಪಾಯಿಂಟ್ ಪ್ರಸ್ತುತಪಡಿಸಲು ನೆರವಾಗುತ್ತದೆ. ಜೊತೆಗೆ ಕ್ಲಿಪ್ ಆರ್ಟ್, ಫೋಟೊ, ಸಂಗೀತವನ್ನು ಅಳವಡಿಸಬಹುದು. ಸ್ಲೈಡ್ ಷೋಗೆ ಶೀರ್ಷಿಕೆ ನೀಡಬಹುದು. ಇವೆಲ್ಲವೂ ಲೈಬ್ರರಿಯಲ್ಲಿ ಸಂಗ್ರಹವಾಗಿರುತ್ತವೆ.

■ ಎಸ್. ತುಂಬೆ